**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 486/2025**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ವಾಸು ನಾಯ್ಕು

ತಂದೆಯ ಹೆಸರು : ರಾಮ

ವಯಸ್ಸು : 46 ವರ್ಷ

ಉದ್ಯೋಗ : ಟೇಲರಿಂಗ್

ವಾಸ್ತವ್ಯ : ದೇವಿ ನಗರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 16/02/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 03.11.2024 ರಂದು ಸಂಜೆ 7.00 ಗಂಟೆ ಸುಮಾರಿಗೆ ಸದರಿ ಪ್ರಕರಣದ ಆರೋಪಿಗಳು ಚಾಸಾ 1 ರವರ ಜೊತೆಯಲ್ಲಿ ಜಗಳ ಮಾಡಿದ್ದರು. 1 ನೇ ಆರೋಪಿ ಈತನು ಚಾಸಾ 1 ರವರಿಗೆ ಕೇಸನ್ನು ವಾಪಸ್ಸು ಪಡೆಯುವಂತೆ ಚುಟಾಯಿಸುತ್ತಿದ್ದರು. ಜಗಳದಲ್ಲಿ 1 ನೇ ಆರೋಪಿ ಉಳಿದ ಆರೋಪಿಗಳನ್ನು ಫೋನ್ ಮೂಲಕ ಕರೆಯಿಸಿರುತ್ತಾನೆ. ಚಾಸಾ 5 ನನ್ನ ಮಗಳು ಗೇಮ್ ಆಡುವಾಗ ಅವಳು ಜಗಳವನ್ನು ಪೊಟೋ ತೆಗೆಯುತ್ತಾಳೆಂದು ತಿಳಿದು 2 ನೇ ಆರೋಪಿ ಅವಳ ಮೊಬೈಲನ್ನು ಕಸಿದು ಎದೆಯ ಮೆ್ೕಲೆ ಕೈಯಿಂದ ಗುದ್ದಿರುತ್ತಾಳೆ. ನಂತರ ಉಳಿದ ಆರೋಪಿತರು ನನ್ನ ಮಗಳ ಮೇಲೆ ಹಲ್ಲೆ ಮಾಡಿದ್ದು ಇರುತ್ತದೆ. ನಂತರ ಸ್ಥಳಕ್ಕೆ ಬೀಟ್ ಗೆ ಹೋಗಿದ್ದ ಪೊಲೀಸರು ಬಂದರು ಆಗ ಆರೋಪಿತರು ಓಡಿಹೋಗಿರುತ್ತಾರೆ. ನನ್ನ ಮಗಳಿಗೆ ಪೆಟ್ಟು ಆಗಿದ್ದು ಅವಳನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಇರುತ್ತದೆ. ದೂರನ್ನು ಚಾಸಾ 1 ರವರು ಪೊಲೀಸರಿಗೆ ನೀಡಿದ್ದು ಇರುತ್ತದೆ. ಅರೋಪಿತರನ್ನು ನೋಡಿದರೆ ಸಾಕ್ಷಿ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : 1 ರಿಂದ 4 ನೇ ಆರೋಪಿ ಪರ ಶ್ರೀ ಅರ ಎಸ ಎಮ್ ವಕೀಲರಿಂದ,**

ಸದರಿ ಘಟನೆ ಅದಿತ್ಯವಾರದಂದು ನಡೆದಿರುತ್ತದೆ. ನಮ್ಮ ಅಂಗಡಿಗೆ ಪಂಚಾಯಿತಿಯಿಂದ ಪರವಾನಿಗೆ ಪಡೆದಿಲ್ಲ. ನಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಸರಾಯಿ ಮಾರಾಟಾ ಮಾಡುತ್ತೇವೆಂದು ಪ್ರಕರಣ ದಾಖಲಿಸಲಾಗಿತ್ತು. ಆರೋಪಿತರು ನಮ್ಮ ಪರಿಚಯದವರು ಇಲ್ಲಾ ಹಾಗೂ ನಮ್ಮ ಸಂಬಂಧಿಕರಲ್ಲ. ಆರೋಪಿತರು ಜಾಲಿಯವರು ಆಗಿದ್ದಾರೆ. ಆರೋಪಿತರಿಗೆ ಹಾಗೂ ನಮ್ಮ ನಡುವೆ ಈ

ಮೊದಲು ಯಾವುದೇ ಜಗಳ ಆಗಿಲ್ಲಾ. ಹಿಂದೆ ಮಂಜುನಾಥ ತಿಮ್ಮಯ್ಯ ನಾಯ್ಕ ರವರ ಮೇಲೆ ಆದ ಪ್ರಕರಣ ಮರಳಿ ಪಡೆಯಲು ಆರೋಪಿತರು ನನ್ನ ಹೆಂಡತಿಗೆ ಕೇಳುತ್ತಿದ್ದರು. ಸದರಿ ಪ್ರಕರಣದ ಆರೋಪಿತರು ಹಿಂದಿನ ಪ್ರಕರಣದಲ್ಲಿ ಆರೋಪಿತರು ಆಗಿದ್ದು ಇಲ್ಲಾ. ಗುನ್ಹಾ ಸ್ಥಳದಲ್ಲಿ ಆರೋಪಿತರು ಬಂದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿದ್ದು ಇಲ್ಲಾ. ಗುನ್ಹಾ ಸ್ಥಳದಿಂದ ಸರಕಾರಿ ಆಸ್ಪತ್ರೆ ಮೂರುವರೆ ಕಿಮೀ ದೂರದಲ್ಲಿ ಇದೆ. ನನ್ನ ಮಗಳನ್ನು ಆಸ್ಪತ್ರೆಗೆ ರಾತ್ರಿ 7.30 ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಘಟನೆಯ ದಿನ ಯಾವುದೇ ಪ್ರ ವ ವರದಿ ಆಗಿದ್ದು ಇಲ್ಲಾ. ಇಂತಹ ಯಾವುದೇ ಘಟನೆ ನಡೆದಿದ್ದೇ ಇಲ್ಲಾ ಎಂದರೆ ಸರಿಯಲ್ಲ. ದ್ವೇಷದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಅಂಗಡಿಗೆ ಬಂದಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಯಾವುದೇ ಪೆಟ್ಟು ಆಗದಿದ್ದರೂ ಸಹ ಆಸ್ಪತ್ರೆಗೆ ಹೋಗಿ ಸುಮ್ಮನೆ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 5 ಮತ್ತು 6 ನೇ ಆರೋಪಿ ಪರ ವಕೀಲರು 1 ರಿಂದ 4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**